# ರಾಣಾ 'ಕಲ್ಯಾಣ'



ತೆಲುಗು ಸಿನಿಮಾಗಳು ತಮ್ಮ ವೈಭವಕ್ಕೆ ಹೆಸರುವಾಸಿ. ಹಾಗೆಯೇ ತೆಲುಗು ಸ್ಟಾರ್‌ಗಳ ಮದುವೆಗಳೂ ವೈಭವೋಪೇತವೇ. ಕೊರೊನಾ ಅನ್ನುವ ಭೂತವೊಂದು ಇಲ್ಲವಾಗಿದ್ದಲ್ಲಿ ರಾಣಾ ದಗ್ಗುಬಾಟಿಯ ಮದುವೆಗೆ ಸಹಸ್ರಾರು ಜನರು ಸೇರುತ್ತಿದ್ದರೇನೋ. ತೆಲುಗು ಚಿತ್ರರಂಗದ ಹಿರಿತಲೆ ಡಿ. ರಾಮಾನಾಯ್ಡು ಕುಟುಂಬದ ಕುಡಿಯೀತ. ರಾಮಾ ನಾಯ್ಡು ಮತ್ತು ರಾಜೇಶ್ವರಿ ದಂಪತಿಗೆ ಮೂವರು ಮಕ್ಕಳು. ದಗ್ಗುಬಾಟಿ ಸುರೇಶ್‌ಬಾಬು, ಲಕ್ಷ್ಮೀ ಮತ್ತು ವೆಂಕಟೇಶ್. ಸುರೇಶ್‌ಬಾಬು ಮಗ ರಾಣಾ. ರಾಮಾ ನಾಯ್ಡು ಅವರ ಮಗ ವೆಂಕಟೇಶ್ ತೆಲುಗು ಚಿತ್ರರಂಗದ ಎವರ್‌ಗ್ರೀನ್ ಹೀರೊ.

ಕುಟುಂಬದ ಈ ಹಿನ್ನೆಲೆಗಿಂತ ಹೆಚ್ಚಾಗಿ ರಾಣಾಗೆ ಕೀರ್ತಿ ತಂದುಕೊಟ್ಟದ್ದು 'ಬಾಹುಬಲಿ'ಯ ಬಲ್ಲಾಳದೇವನ ಪಾತ್ರ. ನಾಯಕ ಪ್ರಭಾಸ್ ಪಾತ್ರಕ್ಕೇ ಸವಾಲೊಡ್ಡಿದ ನಟನೆ ಬಲ್ಲಾಳದೇವನದ್ದು. ಕೊರೊನಾ ಭಯದಿಂದಾಗಿ ರಾಣಾನ ಮದುವೆ ಅತ್ಯಂತ ಸರಳವಾಗಿ ನಡೆದಿದೆ. ಮಿಹಿಕಾ ಬಜಾಜ್ ಜೊತೆಗೆ ನಡೆದ ಈ ಮದುವೆಗೆ ಹಾಜರಿದ್ದವರು ಬರೇ 30 ಮಂದಿ. ಮದುವೆ ಹೈದರಾಬಾದ್‌ನ ರಾಮಾ ನಾಯ್ಡು ಸ್ಟುಡಿಯೊದಲ್ಲಿತ್ತು. ಅಲ್ಲಿ ನಡೆಯುವ ಸಿನಿಮಾ ಮದುವೆಗಳಿಗೇ ಸಾವಿರಾರು ಜನರು ಸೇರುವುದುಂಟು. ನೈಜ ಮದುವೆಗೆ ಹೀಗೆ ಕೈಬೆರಳೆಣಿಕೆಯ ಜನರು ಸೇರಿದ್ದು ದಾಖಲೆಯೇ. ಅಂದ ಹಾಗೆ ರಾಣಾನ ಬಹುತೇಕ ಬಂಧು ಮಿತ್ರರು ಆನ್‌ಲೈನ್‌ನಲ್ಲಿ ಈ ಮದುವೆಗೆ ಸಾಕ್ಷಿಯಾದರು.

ರಾಣಾ ಹುಟ್ಟಿದ್ದು ಚೆನ್ನೈನಲ್ಲಿ. ಕಲಿತದ್ದು ಹೈದರಾಬಾದ್‌ನಲ್ಲಿ. ಬಿಕಾಂಅನ್ನು ಅರ್ಧಕ್ಕೆ ಬಿಟ್ಟ ರಾಣಾ, ಚೆನ್ನೈ ಫಿಲ್ಮ್ ಸ್ಕೂಲ್‌ನಲ್ಲಿ ಇಂಡಸ್ಟ್ರಿಯಲ್ ಫೋಟೊಗ್ರಫಿಯಲ್ಲಿ ಪದವಿ ಪಡೆದ. ಸಿನಿಮಾ ಕುಟುಂಬದ ಕುಡಿಯಾದ್ದರಿಂದ ಸಹಜವಾಗಿಯೇ ಸಿನಿಮಾ ಕಡೆಗೆ ಎಳೆತ ಹೆಚ್ಚಾಗಿತ್ತು. ಆದರೆ ಅದಕ್ಕೂ ಮುನ್ನ ತ್ರಿಡಿ ಕ್ಯಾಮೆರಾ ತಂತ್ರಜ್ಞಾನದ ಕುರಿತು ತರಬೇತಿ ಪಡೆದು, ಹೈದರಾಬಾದ್‌ನಲ್ಲಿ ವಿಶುವಲ್ ಎಫೆಕ್ಟ್ ಸ್ಟುಡಿಯೋ ಸ್ಥಾಪಿಸಿದ. ನಡುವೆ ಸಮರಕಲೆಗಳನ್ನೂ ಅಭ್ಯಾಸ ಮಾಡಿದ. 2010ರಲ್ಲಿ ತೆರೆಗೆ ಬಂದ 'ಲೀಡರ್' ನಟನಾಗಿ ರಾಣಾಗೆ ಉತ್ತಮ ಆರಂಭ ನೀಡಿತು.

'ಬಾಹುಬಲಿ' ಸಿನಿಮಾದ ಬಳಿಕ ರಾಣಾ ತೆಲುಗು, ತಮಿಳು ಮತ್ತು ಹಿಂದಿ ಮೂರೂ ಚಿತ್ರರಂಗದಲ್ಲಿ ಅತ್ಯಧಿಕ ಬೇಡಿಕೆಯ ನಟನಾದ. 'ದಿ ಗಾಝಿ ಅಟ್ಯಾಕ್', 'ಬೇಬಿ' 'ರುದ್ರಮಹಾದೇವಿ' ಮತ್ತು 'ಲೀಡರ್' ಮುಂತಾದ ಹಿಟ್ ಚಿತ್ರಗಳಲ್ಲಿ ರಾಣಾ ಮಿಂಚಿದ್ದಾನೆ. ಮಿಹಿಕಾ ಬಜಾಜ್ ಜೊತೆಗೆ ಕಳೆದ ಮೇನಲ್ಲಿ ರಾಣಾ ನಿಶ್ಚಿತಾರ್ಥ ನಡೆದಿತ್ತು. ಮುಂಬೈಯ ಡ್ಯೂ ಡ್ರಾಪ್ ಡಿಸೈನ್ ಸ್ಟುಡಿಯೋ ಎನ್ನುವ ಇವೆಂಟ್ ಮ್ಯಾನೇಜ್‌ಮೆಂಟ್ ಕಂಪೆನಿಯ ಒಡತಿಯೀಕೆ.

'ಬಾಹುಬಲಿ' ಚಿತ್ರದಲ್ಲಿ ಆತನ ಮೈಕಟ್ಟಿನ ಪ್ರದರ್ಶನ ಯಥೇಚ್ಛವೆಂಬಂತೆ ನಡೆಯಿತು. ಕೆಲವು ದೃಶ್ಯಗಳಲ್ಲಿ ಚಿತ್ರದ ನಾಯಕ ಪ್ರಭಾಸ್‌ನನ್ನೂ ಮೀರಿಸುವಂತೆ ರಾಣಾ ಕಾಣಿಸಿಕೊಂಡದ್ದು ಆತನ ಅಭಿಮಾನಿಗಳ ಸಂಖ್ಯೆಯನ್ನು ಸಾಕಷ್ಟು ಏರಿಸಿದೆ. ಆದರೆ ಕಳೆದ ಕೆಲವು ತಿಂಗಳಿಂದ ಆತನ ಆರೋಗ್ಯದ ಬಗ್ಗೆ ನಾನಾ ಪುಕಾರುಗಳು ಹಬ್ಬಿರುವುದೂ ಸುಳ್ಳಲ್ಲ. ರಾಣಾನಿಗೆ ಕಿಡ್ನಿ ವೈಫಲ್ಯ ಉಂಟಾಗಿದೆ. ಕಿಡ್ನಿ ಕಸಿ ಮಾಡಿಸಿಕೊಳ್ಳಲು ಆತ ಅಮೆರಿಕಕ್ಕೆ ತೆರಳಿದ್ದ ಎನ್ನುವುದು ಹಳೆಯ ಸುದ್ದಿ. ಈ ಸುದ್ದಿ ಕೇವಲ ವದಂತಿ ಎಂದು ರಾಣಾ ಹಲವು ಸಲ ಸ್ಪಷ್ಟೀಕರಣ ಕೊಟ್ಟರೂ ಅಭಿಮಾನಿಗಳ ಅನುಮಾನ ದೂರವಾಗಿಲ್ಲ.

ಬಳಿಕ ಎಚ್‌ಡಿಎಫ್‌ಸಿ ಬ್ಯಾಂಕಿನ ಮಿಲೆನಿಯಂ ಕಾರ್ಡ್‌ನ ಜಾಹೀರಾತಿನಲ್ಲಿ ರಾಣಾ ಕಾಣಿಸಿಕೊಂಡಾಗಲೂ ಅಭಿಮಾನಿಗಳು ಪ್ರಶ್ನೆಗಳ ಸುರಿಮಳೆಗೈದರು. ಆ ಜಾಹೀರಾತಿನಲ್ಲಿ ರಾಣಾನ ಮೈಕಟ್ಟು ಸಾಕಷ್ಟು ಸೊರಗಿದಂತಿದ್ದು, ತೂಕ ತುಂಬ ಕಡಿಮೆಯಾಗಿದೆ ಎನ್ನುವುದು ಮೇಲ್ನೋಟಕ್ಕೇ ಕಾಣಿಸುತ್ತಿತ್ತು. ಸಾವಿರಾರು ಅಭಿಮಾನಿಗಳು 'ರಾಣಾ, ಏಕೆ ಸೊರಗಿದ್ದೀರಿ? ಆರೋಗ್ಯ ಚೆನ್ನಾಗಿದೆಯಲ್ವಾ..?' ಎಂದು ಪ್ರೀತಿಯಿಂದ ಸಾಮಾಜಿಕ ಜಾಲತಾಣಗಳಲ್ಲಿ ಪ್ರಶ್ನಿಸತೊಡಗಿದ್ದು ರಾಣಾನ ನೆಮ್ಮದಿಯನ್ನು ಕೆಡಿಸಿತ್ತು. 'ಅಭಿಮಾನಿಗಳಿಗೆ ಉತ್ತರ ನೀಡಿ ಸಾಕಾಗಿದೆ' ಎಂದು ಸ್ವತಃ ರಾಣಾ ಇನ್‌ಸ್ಟಾಗ್ರಾಂನಲ್ಲಿ ಬರೆದುಕೊಂಡದ್ದೂ ಆಯಿತು. 'ನಾನು ಹೈದರಾಬಾದ್‌ನಿಂದ ಎಲ್ಲೇ ಹೊರಗೆ ಹೋದರೂ ಆರೋಗ್ಯದ ಬಗ್ಗೆ ಗಾಳಿಸುದ್ದಿಗಳು ಹುಟ್ಟಿಕೊಳ್ಳುತ್ತಿವೆ. ಆದರೆ ಅಭಿಮಾನಿಗಳು ನನ್ನ ಬಗ್ಗೆ ತೋರುತ್ತಿರುವ ಕಾಳಜಿ ನೋಡಿ ಖುಷಿಯೂ ಆಗುತ್ತಿದೆ' ಎಂದಿದ್ದಾನೆ ರಾಣಾ.

ರಾಣಾ ನಟ ಮಾತ್ರವಲ್ಲ ನಿರ್ಮಾಪಕನೂ ಹೌದು. ಬಲ್ಲಾಳದೇವನ ಪಾತ್ರದಲ್ಲಿ ಆತನನ್ನು ನೋಡಿದ ಅಭಿಮಾನಿಗಳು ಇದೇ ತರಹದ ಇನ್ನೊಂದು ಪಾತ್ರದ ನಿರೀಕ್ಷೆಯಲ್ಲಿ ಇದ್ದಾರಂತೆ. ಈ ಹಿನ್ನೆಲೆಯಲ್ಲೇ ರಾಣಾ ಶೀಘ್ರವೇ ಹಿರಣ್ಯಕಶಿಪು ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾನೆ. "ದೊಡ್ಡ ಬಜೆಟ್‌ನಲ್ಲಿ ಈ ಸಿನಿಮಾ ನಿರ್ಮಾಣವಾಗಲಿದೆ. ಚಿತ್ರದ ವಿಎಫ್‌ಎಕ್ಸ್ ಕೆಲಸದ ಕುರಿತು ಚರ್ಚಿಸಲು ಅಮೆರಿಕಕ್ಕೆ ಹೋಗಿಬಂದೆ. ಆದರೆ ಅದಕ್ಕೂ ನನ್ನ ಅನಾರೋಗ್ಯದ ಬಗ್ಗೆ ತಳುಕು ಹಾಕಿದರು" ಎನ್ನುವುದು ರಾಣಾ ಅಳಲು. ಹಿರಣ್ಯಕಶಿಪು ಎಂಬ ಪೌರಾಣಿಕ ರಾಕ್ಷಸದೊರೆಯ ಪಾತ್ರದ ಬಗ್ಗೆ ರಾಣಾ ಸಾಕಷ್ಟು ಥ್ರಿಲ್ ಆಗಿದ್ದಾನಂತೆ.

ಸದ್ಯಕ್ಕಂತೂ ರಾಣಾಗೆ ಕೈತುಂಬ ಕೆಲಸವಿದೆ. 'ಹೌಸ್‌ಫುಲ್ 4', 'ಹಾಥಿ ಮೇರೆ ಸಾಥಿ', 'ಭುಜ್: ದಿ ಪ್ರೈಡ್ ಆಫ್ ಇಂಡಿಯಾ' ಮುಂತಾಗಿ ಹಲವು ಹಿಂದಿ ಸಿನಿಮಾಗಳು ಕೈಯಲ್ಲಿವೆ. ಜೊತೆಗೆ ತೆಲುಗಿನಲ್ಲಿ 'ವಿರಾಟಪರ್ವ' ಸಿನಿಮಾ ಕೂಡಾ ಸಿದ್ಧವಾಗುತ್ತಿದೆ. ಈ ಮಧ್ಯೆ ಕ್ರಿಕೆಟ್ ದಂತಕಥೆ, ಶ್ರೀಲಂಕಾದ ವಿಶ್ವಖ್ಯಾತಿಯ ಸ್ಪಿನ್ ಬೌಲರ್ ಮುತ್ತಯ್ಯ ಮುರಳೀಧರನ್ ಬಯೋಪಿಕ್ ಕೂಡಾ ಸಿದ್ಧವಾಗುತ್ತಿದ್ದು ರಾಣಾ ಈ ಚಿತ್ರದ ಸಹನಿರ್ಮಾಪಕ.

ಈ ಡಿಸೆಂಬರ್ 14ಕ್ಕೆ ರಾಣಾಗೆ 36 ತುಂಬುತ್ತದೆ. ಬಾಲ್ಯದಲ್ಲೇ ಈತನ ಬಲಗಣ್ಣು ಕುರುಡಾಗಿತ್ತು. ಬಳಿಕ ಎಲ್‌ವಿ ಪ್ರಸಾದ್ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ನಡೆದು ದೃಷ್ಟಿ ಬಂತು. ಕಾಲೇಜು ದಿನಗಳಲ್ಲಿ ರಾಮ್ ಚರಣ್ ಈತನ ಕ್ಲಾಸ್‌ಮೇಟ್. ಜೊತೆಗೆ ಅಲ್ಲು ಅರ್ಜುನ್ ಕೂಡಾ ಈತನ ಬೆಸ್ಟ್ ಫ್ರೆಂಡ್. ಕಾಲೇಜು ದಿನಗಳಲ್ಲೇ ರಾಣಾ ಸಹಪಾಠಿ ಒಬ್ಬಳನ್ನು ಪ್ರೀತಿಸಿದ್ದನಂತೆ. ಆದರೆ ಆಕೆ ಮದುವೆಯಾಗಿ ಬೇರೆ ಹೋದಳಂತೆ. ಚಿತ್ರರಂಗ ಪ್ರವೇಶಿಸಿದ ಬಳಿಕ ತ್ರಿಷಾ ಕೃಷ್ಣ ಜೊತೆಗೆ ಪ್ರೀತಿ ಆದದ್ದು ಕೆಲಸಮಯ ದೊಡ್ಡ ಸುದ್ದಿಯಾಗಿತ್ತು. ಆದರೆ ಈಗ ಮಿಹಿಕಾ ಬಜಾಜ್ ಜೊತೆಗೆ ಮದುವೆಯಾಗಿದೆ. ಮದುವೆ ಸ್ವಲ್ಪ ತಡವಾಯಿತು ಎಂದುಕೊಂಡರೂ, ತನ್ನ ಸ್ವಭಾವಕ್ಕೆ ತಕ್ಕ ಹುಡುಗಿಯೇ ಸಿಕ್ಕಿದ್ದಾಳೆ ಎನ್ನುವ ಸಂತೋಷ ರಾಣಾನಿಗೆ ಇದೆಯಂತೆ. ಮದುವೆ ಮಂಟಪದಲ್ಲಿ ರಾಮ್ ಚರಣ್ ಮತ್ತು ಅಲ್ಲು ಅರ್ಜುನ್ ಅವರೇ ಭಾರೀ ಮುತುವರ್ಜಿಯಿಂದ ಓಡಾಡುತ್ತಿದ್ದರು.

ವೈಯಕ್ತಿಕವಾಗಿ ರಾಣಾ ಎಲ್ಲರ ಜತೆ ಸೌಹಾರ್ದ ಸಂಬಂಧ ಇಟ್ಟುಕೊಳ್ಳಲು ಬಯಸುವಾತ. ಆದರೆ 2013ರಲ್ಲಿ ತಮಿಳು ಚಿತ್ರನಟ ವಿಕ್ರಮ್ ಜೊತೆಗಿನ ಟ್ವಿಟ್ಟರ್ ಜಗಳವೊಂದು ಬೀದಿರಂಪ ಸೃಷ್ಟಿಸಿದ್ದು ಸುಳ್ಳಲ್ಲ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65